11

# ದೇವರ ಕರೆಯುವಿಕೆಗಳು

ಮಾನವರೊಂದಿಗೆ ದೇವರ ವ್ಯವಹಾರಗಳ ಇತಿಹಾಸವು ದೇವರು ಮಾನವನನ್ನು ಕರೆಯುವ ಇತಿಹಾಸವಾಗಿದೆ. ದೇವರು ಮಾನವ ಕುಲವನ್ನು ಪ್ರೀತಿಸುತ್ತಾನೆ, ಈ ಪ್ರೀತಿಯು ಆತನು ತನ್ನ ಜನರನ್ನು ಹುಡುಕುತ್ತ ಹೋಗುವಂತೆ ಹಾಗೂ ಅವರನ್ನು ತನ್ನ ಬಳಿಗೆ ಕರೆಯುವದಕ್ಕೆ ಕಾರಣವಾಗಿದೆ.

## ಗತ ಕಾಲದಲ್ಲಿ ಆತನ ಕರೆಯುವಿಕೆಗಳು

ನೋಹನು ಜಲಪ್ರಳಯದ ನೀಲಿನಿಂದ ತೊಳೆಯಲ್ಪಟ್ಟು ಶುದ್ಧೀಕರಿಸಲ್ಪಟ್ಟ ಭೂಮಿಯ ಮೇಲೆ ಇಡಲ್ಪಡಲು ಜಲಪ್ರಳಯದ ಮುಂಚಿನ ಕಾಲದೊಳಗಿಂದ ಕರೆಯಲ್ಪಟ್ಟನು (ಆದಿಕಾಂಡ 6). ದೇವರು ಆವನಿಗೆ ನಿರ್ದಿಷ್ಟವಾದ ಆಜ್ಞೆಗಳನ್ನು ಕೊಟ್ಟನು. ನೋಹನು, “ತನಗೆ ದೇವರು ಆಜ್ಞಾಪಿಸಿದ್ದೆಲ್ಲದರ ಪ್ರಕಾರ” ಮಾಡಿದನು (ವ. 22). ದೇವರು ಕರೆಯುವಾಗ ಮನುಷ್ಯನು ತಾನು ಆಶಿರ್ವಾದಿಸಲ್ಪಡಬೇಕೆಂದರೆ ಉತ್ತರ ಕೊಡತಕ್ಕದ್ದು.

ತನ್ನ ಸ್ವದೇಶವನ್ನು ಬಿಟ್ಟು ಹೋಗಬೇಕೆಂದು ಅಬ್ರಾಹಾಮನು ಕರೆಯಲ್ಪಟ್ಟನು (ಆದಿಕಾಂಡ 12:1-4). ವಿಗ್ರಹಾರಾಧನೆಯ ನಾಡಿನಲ್ಲಿ ಅವನು ಜೀವಿಸುತ್ತಿದ್ದನು. ಸಂಪೂರ್ಣವಾಗಿ ಪ್ರತ್ಯೇಕವಾಗಬೇಕೆಂದು ದೇವರು ಅವನನ್ನು ಕರೆದನು. “ನಾನು ತೋರಿಸುವ ದೇಶವನ್ನು” ಅವನಿಗೆ ವಾಗ್ದಾನ ಮಾಡಿದನು. ಇತರ ಅದ್ಭುತಕರ ವಾದ ಆಶೀರ್ವಾದಗಳು ವಾಗ್ದಾನ ಮಾಡಲ್ಪಟ್ಟವು. ಯಾಕಂದರೆ ಅಬ್ರಾಮನು ದೇವರ ಕರೆಗೆ ಉತ್ತರ ಕೊಟ್ಟನು. ಅವನ ಮೂಲಕವಾಗಿ ಅನಂತರದಲ್ಲಿ ಭೂಲೋಕದ ಕುಟುಂಬಗಳು ಆಶೀರ್ವಾದಿಸಲ್ಪಡುವವು. ಅಬ್ರಾಮನು ವಿಧೇಯತೆಯಲ್ಲಿ ಬಲಶಾಲೀ ಜನಾಂಗದ ಪ್ರಾರಂಭವನ್ನು ನೋಡುತ್ತೇವೆ.

ದೇವರು ಇಸ್ರಯೇಲಲನ್ನು ಐಗುಪ್ತದಿಂದ ಹೊರಗೆ ಕರೆದನು. ಅವರನ್ನು ತರುವದಕ್ಕಾಗಿ ಮೋಶೆಯು ಕಳುಹಿಸಲ್ಪಟ್ಟನು (ವಿಮೋಚನಕಾಂಡ 3:10). ಅದ್ಭುತಕರ ವಾದ ಆಶೀರ್ವಾದಗಳು ವಾಗ್ದಾನ ಮಾಡಲ್ಪಟ್ಟಿವೆ. ಆದರೆ ಜನರು ದೇವರ ಕರೆಯನ್ನು ಕೇಳಿ ಮೋಶೆಯ ನಾಯಕತ್ವವನ್ನು ಅನುಸರಿಸುವದರಿಂದ ಉತ್ತರ ಕೊಟ್ಟರೆ ಮಾತ್ರವೇ ಅವರು ಅನುಭವಿಸುವರು. ಐಗುಪ್ತದ ವಿಗ್ರಹಾರಧನೆಯಿಂದ ಅವರು ತಮ್ಮನ್ನು ಬೇರೆ ಮಾಡಿಕೊಳ್ಳಬೇಕು. ಸಿನಾಯಿ ಪರ್ವತದ ಅಡಿಯಲ್ಲಿ ಕೆಲವರು ಮೂರ್ತಿ ಪೂಜಕರಾದಾಗ, ಅವರು ಕೊಲ್ಲಲ್ಪಟ್ಟರು (ವಿಮೋಚನಕಾಂಡ 32).

ಅನೇಕ ವರ್ಷಗಳನಂತರ, ದೇವರು ಇಸ್ರಯೇಲ್ಯರನ್ನು ಬಬಿಲೋನಿನ ಸೆರೆಯೊಳಗಿಂದ ಕರೆದನು. ಎಪ್ಪತ್ತು ವರ್ಷಗಳನಂತರ ಜಯಿಸಲ್ಪಟ್ಟ ಇಸ್ರಯೇಲ್ಯರನ್ನು

ಕಾನಾನಿಗೆ ಹಿಂದಿರುಗಲು ದೇವರು ಅಪ್ಪಣೆ ಕೊಟ್ಟನು (ಯೆರೆಮೀಯ 29:10). ಅವರು ತಮ್ಮ ಸ್ವದೇಶಕ್ಕೆ ಹಿಂದಿರುಗಿ ಹೋಗಿ, ಅವರು ತಮ್ಮ ಪವಿತ್ರ ಪಟ್ಟಣವನ್ನು ಪುನಃ ಕಟ್ಟಬೇಕೆಂಬ ಅಪ್ಪಣೆಯು ಕೋರೇಷನಿಂದ ಹೊರಟಿತು (2 ಪೂರ್ವಕಾಲ ವೃತ್ತಾಂತ 36:22, 23). ಯೆರುಬ್ಬಾಬೇಲು, ಎಜ್ರ, ಹಾಗೂ ನೆಹಮೀಯರ ನಾಯಕತ್ವದಲ್ಲಿ ಇಸ್ರಯೇಲ್ಯರ ದೊಡ್ಡ ಸಂಖ್ಯೆಯು ತಮ್ಮ ನಾಡಿಗೆ ಹಿಂದಿರುಗಿತು. ಗೋಡೆಗಳನ್ನು ಪುನಃ ಕಟ್ಟಿತು ಮತ್ತು ದೇವಲಯದ ಜೀರ್ಣೋದ್ಧಾರ ಮಾಡಿತು.

## ಇಂದು ಆತನ ಕರೆಯುವಿಕೆಗಳು

ಇಂದು ದೇವರು ಕರೆಯುತ್ತಾನೆ. ನಮಗೆ ಆತನ ಕರೆಯುವಿಕೆಯು ಕತ್ತಲೆಯೊಳಗಿಂದ ಆತ್ಮಿಕ ರಾಜ್ಯಕ್ಕೆ ಕರೆಯಾಗಿದೆ.

ನಾವು ಸುವಾರ್ತೆಯಿಂದ ಕರೆಯಲ್ಪಟ್ಟಿದ್ದೇವೆ (2 ಥೆಸಲೊನೀಕ 2:14). ಇದು ಅದ್ಭುತಕರವಾದ, ರಹಸ್ಯವಾದ ಕರೆಯಾಗಿರುವದಿಲ್ಲ. ಅದು ದೇವರ ವಾಕ್ಯದ ಮುಖಾಂತರವಾಗಿರುತ್ತದೆ. ನಾವು ಯಾವುದಾದರಿಂದ ಯಾವುದಾದರೊಳಗೆ ಕರೆಯಲ್ಪಟ್ಟಿದ್ದೇವೆ.

> ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜ್ಯವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ (1 ಪೇತ್ರ 2:9).
>
> ... ತನ್ನ ರಾಜ್ಯ ಪ್ರಭಾವಗಳಲ್ಲಿ ಪಾಲುಗರರಾಗುವದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನೀವು ನಡೆಯ ಬೇಕೆಂದು ಖಂಡಿತವಾಗಿ ಹೇಳುತ್ತಾ ಇದ್ದೇವೆಂಬುದು ನಿಮಗೇ ತಿಳಿದದೆ (1 ಥೆಸಲೊನೀಕ 2:12).

ಈ ಕರೆಯನ್ನು ಇತರ ವಾಕ್ಯಗಳು ವಿವರಿಸುತ್ತವೆ. ಇದು ದೇವರ ಕರೆಯುವಿಕೆಯೆಂದು ಅಪೊಸ್ತಲರ ಕೃತ್ಯ 2:39 ಹೇಳುತ್ತದೆ. ನಾವು ದೇವರ ಜನರಾಗಿರಲು ಕರೆಯಲ್ಪಟ್ಟಿದ್ದೇವೆ (1 ಕೊರಿಂಥ 1:2). ಪರಲೌಕಿಕ ಕರೆಯಾಗಿದೆ (ಇಬ್ರಿಯ 3:1).

ನಮ್ಮ ಹೊಸ ಒಡಂಬಡಿಕೆಯಲ್ಲಿ ಒಂದು ಪದವಿದ್ದು ಅದರ ಅರ್ಥ ಅಕ್ಷರಶಃವಾಗಿ ಹೊರಗೆ ಕರೆಯಲ್ಪಟ್ಟವರು ಎಂದಾಗುತ್ತದೆ. ಆ ಪದವು "ಚರ್ಚ್" ಎಂಬುದು. ಗ್ರೀಕ್ ಪದ ಎಕ್ಲೇಸಿಯ. ಇದು ಎರಡು ಪದಗಳಿಂದ ಕೂಡಿದ್ದು ಆಗಿರುವುದು: "ಯಿಕ" ಇದರ ಅರ್ಥ "ಹೊರಗೆ," ಮತ್ತು "ಕಾಲಿಯೊ," ಇದರ ಅರ್ಥ "ಕರೆ" ಎಂಬುದು. "ಸಭೆ" ಎಂಬ ಪದದ ಅರ್ಥ "ಹೊರಗೆ ಕರೆಯಲ್ಪಟ್ಟವರು" ಎಂದಾಗುತ್ತದೆ. ಕರ್ತನ ಸಭೆಯನ್ನು ಕುರಿತು ನಾವು ಹೇಳುವಾಗ "ಕರ್ತನಿಗೆ ಒಳಪಟ್ಟವರು ಹೊರಗೆ ಕರೆಯಲ್ಪಟ್ಟವರು" ಎಂದರ್ಥವಾಗುತ್ತದೆ. ಇದು ಸಭೆಯ ಸದಸ್ಯನಾಗಿರುವುದು ಅಗತ್ಯವಾದದ್ದೋ ಇಲ್ಲವೋ ಎಂಬುದರ ಪ್ರಶ್ನೆಯನ್ನು ನಿರ್ಣಯಿಸಬೇಕು. ಹೊರಗೆ ಕರೆಯಲ್ಪಡುವದರ ಅವಶ್ಯಕತೆಯಿದೆಯೋ? ಅವಶ್ಯಕತೆಯಿದೆ. ಒಬ್ಬ ವ್ಯಕ್ತಿಯು ಕತ್ತಲೆಯೊಳಗಿಂದ ಬೆಳಕಿನೊಳಗೆ ಕರೆಯಲ್ಪಟ್ಟರೆ ಅವನು ಹೊರಗೆ ಕರೆಯಲ್ಪಟ್ಟವನು. ಇಲ್ಲವೇ ಸಭೆಯ ಭಾಗವಾಗುವನು.

2 ಪೇತ್ರ 1:5-11ರಲ್ಲಿ "ಆತನು ಕರೆಯುವ ಮತ್ತು ಆಯ್ಕೆ ಮಾಡಿಕೊಳ್ಳುವ ಬಗ್ಗೆ ನಿಶ್ಚಿತವಾದ" ಮಾರ್ಗವನ್ನು ಕಂಡುಕೊಳ್ಳುತ್ತೇವೆ. ಆ ವಾಕ್ಯದಲ್ಲಿ ಪೇತ್ರನು ಕೆಲವು ಸ್ಪಷ್ಟವಾದ ಕ್ರೈಸ್ತ ಗುಣಲಕ್ಷಣಗಳನ್ನು ಹೇಳಿದ್ದಾನೆ: ಪೂರ್ಣಾಸಕ್ತಿ, ನಂಬಿಕೆ, ಸದ್ಗುಣ, ಜ್ಞಾನ, ದಯೆ, ತಾಳ್ಮೆ, ಭಕ್ತಿ, ಸಹೋದರ ಸ್ನೇಹ ಹಾಗೂ ಪ್ರೀತಿ. "ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವದಿಲ್ಲ" (ವ. 10). ಹೌದು, ಕೃಪೆಯಿಂದ ಬಿದ್ದು ಹೋಗುವ ಸಾಧ್ಯತೆಯಿದೆ. ಆತನ ಕರೆಯುವಿಕೆಯನ್ನು ಸರಿಯಾದದ್ದನ್ನಾಗಿಯೂ ನಿಶ್ಚಿತವಾದದ್ದಾನ್ನಾಗಿಯೂ ಮಾಡಿಕೊಳ್ಳಲಿಕ್ಕೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ಅಗತ್ಯತೆಯಿದೆ.

---

## ಮೂರು ರಾಜ್ಯಗಳು

ನಿಸರ್ಗದ ರಾಜ್ಯ: ನಾವು ಜೀವಿಸುತ್ತಿರುವ ಈ ಪ್ರಾಕೃತ ಜಗತ್ತು ಮಾಂಸಿಕ ದೇಹದ ಮತ್ತು ಮಾಂಸಿಕ ದೇಹಕ್ಕಾಗಿರುವ ನೈಸರ್ಗಿಕ ಮನುಷ್ಯನ ರಾಜ್ಯವಾಗಿದೆ. ದೇವರು ಈ ಲೋಕದ ಪ್ರಭುವಾಗಿದ್ದಾನೆ. ಭೂಲೋಕದ ಎಲ್ಲಾ ಜನರು ಪ್ರಜೆಗಳಾಗಿದ್ದಾರೆ. ಇದು ಸೃಷ್ಟಿಯ ನಿಯಮಗಳಿಂದ ಆಳಿಕೆ ಮಾಡಲ್ಪಡುತ್ತಿದೆ. ಈ ನೈಸರ್ಗಿಕ ನಿಯಮಗಳು ದೇವರ ನಿಯಮಗಳಾಗಿವೆ. ಅವು ಸ್ಪಷ್ಟವಾದವಗಳೂ ಅವಲಂಭಿಸ ತಕ್ಕವುಗಳೂ ಆಗಿವೆ. ಹಾಗೂ ದೇವರ ಅಸ್ತಿತ್ವಕ್ಕಾಗಿ ಬಲವಾದ ರುಜುವಾತುಗಳಲ್ಲಿ ಒಂದನ್ನು ಒದಗಿಸುತ್ತವೆ.

ಕೃಪೆಯ ರಾಜ್ಯ: ಕೃಪೆಯ ರಾಜ್ಯವು "ದೇವರ ರಾಜ್ಯದಂತೆ," "ಕ್ರಿಸ್ತನ ರಾಜ್ಯದಂತೆ" ಮತ್ತು "ಪರಲೋಕ ರಾಜ್ಯದಂತೆ" ಎಂದು ಹೇಳಲ್ಪಟ್ಟಿದೆ. ದೇವರ ಪ್ರಿಯ ಕುಮಾರನ ರಾಜ್ಯದೊಳಗೆ ವರ್ಗಾಯಿಸಲ್ಪಟ್ಟಿರುವ ಎಲ್ಲರನೊಳಗೊಂಡಿರುವ ಸಭೆಯು ಅದಾಗಿದೆ (ಕೊಲೊಸ್ಸೆ 1:13). ಕ್ರಿಸ್ತನು ನಮ್ಮನ್ನು ಆಳುವಾತನು; ಆತನು ಅರಸನು (ಮತ್ತಾಯ 28:18; ಎಫೆಸ 1:22, 23). ಆತನ ಲೋಕವು ಆತ್ಮಿಕ ರಾಜ್ಯವಾಗಿದೆ. ಅದರ ನಿಯಮವು ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ ಹೊಸ ಒಡಂಬಡಿಕೆಯಾಗಿದೆ.

ಮಹಿಮೆಯ ರಾಜ್ಯ: ಮೂರನೆಯ ರಾಜ್ಯವು ಮಹಿಮೆಪಡಿಸಲ್ಪಟ್ಟ ಮನುಷ್ಯನ ಮತ್ತು ಮಹಿಮೆಪಡಿಸಲ್ಪಟ್ಟ ಮನುಷ್ಯನಿಗಾಗಿ ಇರುವ ರಾಜ್ಯವಾಗಿದೆ. ನಂಬಿಗಸ್ತರಾಗಿರವವರಿಗೆ ಈ ರಾಜ್ಯದೊಳಗೆ ವಿಪುಲವಾದ ಪ್ರವೇಶವು ವಾಗ್ದಾನ ಮಾಡಲ್ಪಟ್ಟಿದೆ (2 ಪೇತ್ರ 1:11). ಅದು ಪರಲೋಕವೇ ಆಗಿದೆ. ದೇವರು ಅಲ್ಲಿ ಆಡಳಿತ ಮಾಡುವವನಾಗಿದ್ದಾನೆ, ಮತ್ತು ನಿತ್ಯತ್ವದ ಮುಖಾಂತರ ವಿಮೋಚಿಸಲ್ಪಟ್ಟವರ ಮೇಲೆ ಆತನು ಆಳುವನು.

© 2009 Truth for Today